ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 557/2023

ಸಿ ಡಬ್ಲ್ಯೂ-4

ಪಿ ಡಬ್ಲ್ಯೂ- 3

ದಿಃ 02-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ರಾಮಚಂದ್ರ ನಾರಾಯಣ ಗಾಂವಕರ

ತಂದೆಯ ಹೆಸರುಃ ನಾರಾಯಣ

ವಯಸ್ಸುಃ 45 ವರ್ಷ

ಉದ್ಯೋಗಃ ವ್ಯವಹಾರ

ವಿಳಾಸಃ ವಾಸರಕುದ್ರಿಗಿ, ಅಂಕೋಲಾ.

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಚಾಸಾ-2 ರವರ ಪರಿಚಯ ಇರುತ್ತದೆ. ದಿಃ15-04-2023 ರಂದು ಅಂಕೋಲಾದ ಪೊಲೀಸ್ ಠಾಣೆಗೆ ಪೊಲೀಸರು ಅಪಘಾತದ ವಿಷಯವಾಗಿ ಅಪಘಾತಪಡಿಸಿದ ಆಟೊ ರಿಕ್ಷಾದ ಪಂಚನಾಮೆಗೆಂದು ಹೋಗಿರುತ್ತೇನೆ. ಅಲ್ಲಿ ಪೊಟೋಗಳನ್ನು ಕಲೆಕ್ಟ ಮಾಡಿಕೊಂಡು, ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಮುಂದುವರೆದು ಪೊಟೋಗಳನ್ನು ಹೊಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆಟೋ ರಿಕ್ಷಾದ ಸಂಖ್ಯೆ ಕೆ ಎ 30-5087 ಆಗಿರುತ್ತದೆ. ಸರಕಾರಿ ಅಭಿಯೋಜಕರು ಎ ಎಲ್ಲಿ ಬರುತ್ತದೆ ಎಂದು ಕೇಳಿದಾಗ ಸಾಕ್ಷಿಯು ಕೆ ಎ 30-ಎ-5087 ಎಂದು

ನುಡಿಯುತ್ತಾರೆ. ನಾನು ಪಂಚನಾಮೆಗೆ ಹೋದಾಗ ಬೆಳಿಗ್ಗೆ 10.30 ರಿಂದ 11.30 ಗಂಟೆಯವರೆಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿ ಪರ ವಕೀಲರು ಸರಕಾರಿ ಅಬಿಯೋಜಕರು ಹೇಳಿ ಕೊಟ್ಟಂತೆ ಸಾಕ್ಷಿಯು ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಎಂದು ತಕರಾರು ಎತ್ತಿದ್ದರಿಂದ ಸಾಕ್ಷಿಯು ನನಗೆ ಸರಕಾರಿ ಅಬಿಯೋಜಕರು ಏನನ್ನೂ ಹೇಳಿ ಕೊಟ್ಟಿರುವುದಿಲ್ಲ, ಹೇಳುವುದರಿಂದ ವ್ಯತ್ಯಾಸವಾಗುತ್ತದೆ ಎಂದು ನುಡಿಯುತ್ತಾರೆ. ಪಂಚನಾಮೆಗೆಂದು ಹೋದಾಗ ನಾನು, ಚಾಸಾ–5 ಮತ್ತು ಆಟೊ ಚಾಲಕ ಇದ್ದೇವು ಎಂದು ನುಡಿಯುತ್ತಾರೆ. ನಾನು ಅಂದು ನೋಡಿದ ಆಟೊ ಚಾಲಕನು ಇಂದು ನ್ಯಾಯಾಲಯದ ಮುಂದೆ ಇರುತ್ತಾರೆ. ಸಾಕ್ಷಿಯು ಪಂಚನಾಮೆ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಪಂಚನಾಮೆಯನ್ನು ನಿಪಿ–9, ಅದರ ಮೇಲಿರುವ ಸಹಿಯನ್ನು ನಿಪಿ–9 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪೊಟೋ ಗಳನ್ನು ಗುರುತಿಸಿದ್ದು, ಅವುಗಳನ್ನು ತಕರಾರಿಗೆ ಒಳಪಟ್ಟು ನಿಪಿ–10 ಮತ್ತು 11 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

2. ಪಂಚನಾಮೆಗೆಂದು ಹೋದಾಗ ಬೆಳಿಗ್ಗೆ 10.45 ರಿಂದ 11.30 ಗಂಟೆಯಾಗಿತ್ತು ಎಂದರೆ ಸರಿ.

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ರವರಿಂದಃ

3. ನಿಮ್ಮ ಊರು ಯಾವುದು ಎಂದರೆ ಸಾಕ್ಷಿಯು ವಾಸರಕುದ್ರಿಗೆ ಎಂದು ನುಡಿಯುತ್ತಾರೆ. ಅಂಕೋಲಾದಿಂದ ವಾಸರಕುದ್ರಿಗೆ ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿಯು 15 ಕಿ.ಮೀ ಆಗುತ್ತದೆ ಎಂದು ನುಡಿಯುತ್ತಾರೆ. ನೀವು ವಾಸರಕುದ್ರಿಗೆ ಗ್ರಾಮದಲ್ಲಿ ನಾನು ಸಮಾಜ ಸೇವೆಯಲ್ಲಿ ಗುರುತಿಸಿಕೊಂಡಿರುತ್ತೀರಿ ಎಂದರೆ ಸರಿ. ಪಂಚಾಯತಿಯಲ್ಲಿ ನೀವೇನಾದರೂ ಸದಸ್ಯರು ಆಗಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆದರೆ ಪಂಚಾಯತಿಯಲ್ಲಿ ಕೆಲವೊಂದು ಜವಾಬ್ದಾರಿಗಳನ್ನು ನಿಭಾಯಿಸುತ್ತೇನೆ ಎಂದರೆ ಸರಿ. ನ್ಯಾಯಾಲಯದಲ್ಲಿ ಪ್ರಕರಣದ ಬಗ್ಗೆ ಹಾಗೂ ದಾಖಲಾತಿಗಳ ಬಗ್ಗೆ ಊರಿನವರು ನಿಮ್ಮ ಹತ್ತಿರ ಸಲಹೆಯನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ನೀವು ನ್ಯಾಯಾಲಯದಲ್ಲಿ ಸಾಕ್ಷಿದಾರನಾಗಿ ಎಷ್ಟು ಪ್ರಕರಣದಲ್ಲಿ ಬಂದಿರುತ್ತೀರಿ ಎಂದರೆ ಸಾಕ್ಷಿಯು ಒಂದು ಸಲ ನನ್ನ ದೊಡ್ಡಪ್ಪನ ಮಗನ ಪ್ರಕರಣಕ್ಕೆ ಸಂಬಂಧಪಟ್ಟು ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ–1 ಅಥವಾ ಚಾಸಾ–1 ರವರ ಹೆಂಡತಿ ನಿಮಗೆ ಸಂಬಂಧಿಕರು ಆಗಬೇಕಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಚಾಸಾ–1 ರವರು ಇಂದು ನ್ಯಾಯಾಲಯದಲ್ಲಿ ನಿಮ್ಮ ಜೊತೆ ಕುಳಿತುಕೊಂಡಿದ್ದರು ಎಂದರೆ ಸಾಕ್ಷಿಯು ಯಾಕೆ ಕುಳಿತುಕೊಳ್ಳಬಾರದಾ ಎಂದು ಕೇಳುತ್ತಾರೆ. ಸಾಕ್ಷಿಯು

ಮುಂದುವರೆದು ಚಾಸಾ-1 ರವರು ಆಕಡೆ ಕುಳಿತುಕೊಂಡಿದ್ದು, ನಾನು ಅವರ ಪಕ್ಕ ಕುಳಿತುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

4. ಪೊಲೀಸರು ನಿಮ್ಮನ್ನು ಕರೆದರು ಎಂದಾಗ ನೀವು ಎಲ್ಲಿ ಇದ್ದೀರಿ ಎಂದರೆ ಸಾಕ್ಷಿಯು ತಹಶೀಲ್ದಾರ ಕಚೇರಿಯಲ್ಲಿ ಇದ್ದೇನು ಎಂದು ನುಡಿಯುತ್ತಾರೆ. ಎಷ್ಟು ಸಮಯವಾಗಿತ್ತು ಎಂದರೆ ಸಾಕ್ಷಿಯು 10.30 ಗಂಟೆಯಾಗಿತ್ತು ಎಂದು ನುಡಿಯುತ್ತಾರೆ. ಯಾವ ಪೊಲೀಸರು ಬಂದಿರುತ್ತಾರೆ ಎಂದರೆ ಸಾಕ್ಷಿಯು ಯಾವ ಪೊಲೀಸರು ಎಂದು ಗೊತ್ತಿರುವುದಿಲ್ಲ. ಪೊಲೀಸರು ನಿಮ್ಮನ್ನು ಮೌಖಿಕವಾಗಿ ಕರೆದಿರುತ್ತಾರಾ ಅಥವಾ ಲಿಖಿತವಾಗಿ ನೋಟಿಸನ್ನು ಕೊಟ್ಟು ಕರೆದಿರುತ್ತಾರಾ ಎಂದರೆ ಸಾಕ್ಷಿಯು ಮೌಖಿಕವಾಗಿ ಕರೆದಿರುತ್ತಾರೆ ಎಂದು ನುಡಿಯುತ್ತಾರೆ. ನೀವು ರಿಕ್ಷಾ ಕಡೆಗೆ ಹೋದಾಗ ಯಾರು ಯಾರು ಇದ್ದರು ಎಂದರೆ ಸಾಕ್ಷಿಯು ನಾನು ಬಾವಿಕೇರಿಗೆ ಹೋದಾಗ ಪಂಚನಾಮೆಗೆಂದು ಪೊಲೀಸ್ ಇಲಾಖೆಯವರು ಇದ್ದರು ಘಟನಾ ಸ್ಥಳದ ಪಂಚನಾಮೆಯನ್ನು ಮಾಡುವ ಕಾಲದಲ್ಲಿ ನಾನು ಅಲ್ಲಿಗೆ ಹೋಗಿದ್ದರಿಂದ ಅಂಕೋಲಾದಲ್ಲಿ ಪಂಚನಾಮೆಯನ್ನು ಮಾಡುವುದು ಇದೆ ಎಂದು ಪೊಲೀಸರು ನನ್ನನ್ನು ಕರೆದಿರುತ್ತಾರೆ ಎಂದು ನುಡಿಯುತ್ತಾರೆ.

ಮುಂದುವರೆದ  ಪಾಟೀ ಸವಾಲುನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.